ದಿನಾಂಕಃ 25-01-2025 ರಂದು ಸಾಕ್ಷಿಯನ್ನು ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ**

ಇರುವುದಿಲ್ಲ.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ವೈ ಎಂ ಆರ್ ವಕೀಲರಿಂದಃ**

ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ಹಾಗಾಗಿ ನನ್ನ ಮುಖ್ಯ ವಿಚಾರಣಾ ಪ್ರ.ಪತ್ರದಲ್ಲಿ ಬರೆದಿರುವ ಸಂಗತಿಗಳು ನನಗೆ ಗೊತ್ತಿಲ್ಲ. ಈ ದಾವೆಯನ್ನು ನಾನು ಪ್ರತಿವಾದಿಗಳ ವಿರುದ್ದ ದಾವಾಸ್ತಿಯಲ್ಲಿ ಪಾಲುವಿಭಾಗ ಕೋರಿ ಹೂಡಿರುತ್ತೇನೆ. ನನ್ನ ಗಂಡ ಉಮಾಪತಿ 8 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ಸದರಿ ಉಮಾಪತಿಯ ತಂದೆಯಾದ ಬಸಪ್ಪನವರಿಗೆ ಕಗತೂರಿನಲ್ಲಿ 1/4 ಎಕರೆ ಜಮೀನು ಇದೆ. ಆಗರದಹಳ್ಳಿ ಕ್ಯಾಂಪ್ ನಲ್ಲಿ ನನ್ನ ಗಂಡ ಮಾಡಿದ ಮನೆ ಇದೆ. ಸದರಿ ಮನೆಯನ್ನು ನನ್ನ ಮಗಳಿಗೆ ನನ್ನ ಗಂಡ ದಾನವಾಗಿ ಕೊಟ್ಟಿರುತ್ತಾರೆ. ಸದರಿ ಮನೆಯ ವಿಸ್ತೀರ್ಣ 50 ಇಂಟು 20 ಅಡಿ ಇದೆ. ಸದರಿ ಆಸ್ತಿ ಮೂಲತಃ ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ, ಸದರಿ ಆಸ್ತಿಯನ್ನು ನನ್ನ ಗಂಡ ಖರೀದಿಸಿರುತ್ತಾರೆ. ಸದರಿ ಖರೀದಿ ವ್ಯವಹಾರ ನನಗೆ ಗೊತ್ತಿಲ್ಲ. ಸದರಿ ಮನೆಯನ್ನು 20 ವರ್ಷಗಳ ಹಿಂದೆ ಖರೀದಿಸಿರುತ್ತಾರೆ.

ಕಗತೂರಿನಲ್ಲಿದ್ದ ಅಸ್ತಿ, ಆಗರದಹಳ್ಳಿ ಕ್ಯಾಂಪ್‌ನಲ್ಲಿ ಮನೆ ಮತ್ತು ದಾವಾಸ್ತಿ ನಮ್ಮ ಮನೆತನಕ್ಕೆ ಸೇರಿದ ಆಸ್ತಿ ಎಂದರೆ ಸರಿ. ನನ್ನ ಗಂಡ ಜೀವಿತಾವಧಿಯಲ್ಲಿ ಸದರಿ 3 ಆಸ್ತಿಗಳ ಕುರಿತು ಯಾವುದೇ ಪಾಲುವಿಭಾಗ ಮಾಡಿಲ್ಲ. ಸದರಿ ಕಗತೂರಿನಲ್ಲಿದ್ದ ಅಸ್ತಿ, ಆಗರದಹಳ್ಳಿ ಕ್ಯಾಂಪ್ ನಲ್ಲಿ ಮನೆಯನ್ನು ಈ ದಾವೆಗೆ ಸೇರಿಸಿಲ್ಲ ಎಂದರೆ ಸರಿ. ಸದರಿ ದಾವಾಸ್ತಿ ನನ್ನ ಗಂಡ ಮೃತಪಟ್ಟ ತರುವಾಯ ನನ್ನ ಹೆಸರಿಗೆ ಖಾತೆ ನಮೂದಾಗಿದೆ ಎಂದರೆ ಸಾಕ್ಷಿ ನನ್ನ ಮತ್ತು ನನ್ನ ಗಂಡುಮಕ್ಕಳಾದ ಚಂದ್ರಪ್ಪ ಮತ್ತು ಮಲ್ಲಿಕಾರ್ಜುನರವರ ಹೆಸರಿನಲ್ಲಿ ಜಂಟಿ ಖಾತೆಯಾಗಿದೆ ಎಂದು ನುಡಿಯುತ್ತಾರೆ. ನನ್ನ ಹೆಣ್ಣು ಮಕ್ಕಳನ್ನು ಬಿಟ್ಟು ಜಂಟಿ ಖಾತೆಯನ್ನು ಮಾಡಲಾಗಿರುತ್ತದೆ. ನನಗೆ ಇಬ್ಬರು ಹೆಣ್ಣು ಮಕ್ಕಳಿದ್ದುಸದರಿಯವರು ವಿವಾಹವಾಗಿ ಅವರವರ ಗಂಡನ ಮನೆಯಲ್ಲಿ 30-40 ವರ್ಷಗಳಿಂದ ವಾಸವಾಗಿದ್ದಾರೆ.

ದಾವಾಸ್ತಿ ಮೂಲತಃ ಖುಷ್ಕಿ ಜಮೀನಾಗಿತ್ತು ಎಂದರೆ ಸರಿ. ಪ್ರಸ್ತುತ ಸದರಿ ಜಮೀನನ್ನು ನನ್ನ ಇಬ್ಬರು ಗಂಡು ಮಕ್ಕಳು ಅಡಿಕೆ ತೋಟವಾಗಿ ಅಭಿವೃದ್ದಿಪಡಿಸಿದ್ದಾರೆ ಎಂದರೆ ಸಾಕ್ಷಿ ನನ್ನ

ಗಂಡನಿದ್ದಾಗಲೇ ತೋಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ದಾವಾಸ್ತಿಯಲ್ಲಿನ ಅಡಿಕೆ ತೋಟದಲ್ಲಿ 20 ವರ್ಷಗಳ ಹಿಂದೆ 2 ಬೋರ್ ಗಳನ್ನು ಕೊರೆಸಿರುತ್ತೇವೆ. ದಾವಾಸ್ತಿಯನ್ನು ಹೊರತುಪಡಿಸಿ ನಮ್ಮ ಕುಟುಂಬಕ್ಕೆ ಆದಾಯ ಬರುವಂತಹ ಬೇರೆ ಆಸ್ತಿಗಳು ಇರಲಿಲ್ಲ ಎಂದರೆ ಸರಿ. ಹಾಗಾಗಿ ಸದರಿ ಜಮೀನಿನ ಅಭಿವೃದ್ಧಿಗಾಗಿ ನಾನು ಮತ್ತು 1 ಮತ್ತು 3 ನೇ ಪ್ರತಿವಾದಿ ಸೇರಿ ಪ್ರಗತಿ ಕೃಷ್ಣ ಗ್ರಾಮೀಣ ಬ್ಯಾಂಕ್‌ನಲ್ಲಿ, ತುಮ್‌ಕೋಸ್‌ನಲ್ಲಿ ಸಾಲ ಪಡೆದಿರುತ್ತಾರೆ ಎಂದರೆ ಸಾಕ್ಷಿ ನಾನು 3 ವರ್ಷದ ಹಿಂದೆ ರೂ.1,50,000/-ಗಳನ್ನು ಪಡೆಯಲು ಮಾತ್ರ ಸಹಿ ಮಾಡಿದ್ದು ಉಳಿದ ಸಾಲಗಳ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅಗರದಳ್ಳಿ ಕೋ ಅಪರೇಟಿವ್ ಸೊಸೈಟಿಯಲ್ಲಿ ಸಾಲ ಪಡೆದಬಗ್ಗೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನನಗೆ ತಿಳಿಯದಂತೆ ನನ್ನ ಸಹಿಯನ್ನು ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಬಡ್ಡಿ ಮತ್ತು ಸಾಲ ಎಲ್ಲಾ ಸೇರಿ ಪ್ರಸ್ತುತ ದಾವಾಸ್ತಿಯ ಮೇಲೆ 6 ಲಕ್ಷ ರೂ. ಸಾಲವಿದೆ ಎಂದರೆ ಸರಿ.

**(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು).**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

02ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.